ಮಾಲೀಕರಿಗೆ ಪಾವತಿಸಿ ಸ್ವತ್ತನ್ನು ಕಲಂ. 16(1) ರಂತೆ ಸ್ವಾಧೀನಪಡಿಸಿಕೊಳ್ಳಲಾಗುತ್ತದೆ.

ಈ) ಸ್ವತ್ತನ್ನು ಭೂಸ್ವಾಧೀನ ಕಾಯ್ದೆಯನ್ವಯ ನಿರ್ದಿಷ್ಟಪಡಿಸಿದ ಕ್ರಮಗಳನ್ನು ಜರುಗಿಸಿ ಭೂಸ್ವಾಧೀನಪಡಿಸಿಕೊಂಡು, ಪಾಲಿಕೆಯ ವಶಕ್ಕೆ ಪಡೆದ ನಂತರ ರಸ್ತೆಗೆ ಅಡ್ಡಲಾಗಿ ನಿರ್ಮಿಸಿರುವ ಕಾಂಪೌಂಡ್ ಮತ್ತು ಶೆಡ್‌ನ್ನು ತೆರವುಗೊಳಿಸಲಾಗುವುದು.

ಕ್ರೀಡಾಂಗಣದ ಕಾಮಗಾರಿ

87 : (107)

ಶ್ರೀ ರುದ್ರೇಶ್‌ಗೌಡ ವೈ.ಎನ್. (ಬೇಲೂರು)

ಅ) ಅರಸೀಕೆರೆ ತಾಲ್ಲೂಕು ಜಾವಗಲ್ ಗ್ರಾಮದ ಜಾವಗಲ್ ಶ್ರೀನಾಥ್ ಕ್ರೀಡಾಂಗಣದ ಕಾಮಗಾರಿಯು ಯಾವಾಗ ಪ್ರಾರಂಭವಾಯಿತು?

ಆ) ಈ ಕಾಮಗಾರಿಗೆ ನಿಗದಿಪಡಿಸಿದ ಅನುದಾನವೆಷ್ಟು? ಹಾಗೂ ಈಗ ಕಾಮಗಾರಿಯು ಯಾವ ಹಂತದಲ್ಲಿದೆ?

ಇ) ಈ ಕ್ರೀಡಾಂಗಣದಲ್ಲಿ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಶೌಚಾಲಯ, ಆಟಗಾರರಿಗೆ ಟ್ರ್ಯಾಕ್ ಅಳವಡಿಸಿಲ್ಲದಿರುವುದಕ್ಕೆ ಕಾರಣವೇನು?

ಈ) ಈ ಸೌಲಭ್ಯಗಳನ್ನು ಯಾವಾಗ ಒದಗಿಸಲಾಗುವುದು?

ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ದಿನಾಂಕ : 21-07-2000 ರಂದು ಪ್ರಾರಂಭಗೊಂಡಿದೆ.

ಆ) ಕಾಮಗಾರಿಗೆ ನಿಗದಿ ಪಡಿಸಿದ ಅಂದಾಜು ವೆಚ್ಚ ರೂ. 14.50 ಲಕ್ಷ ಹಾಗೂ ಪೆವಿಲಿಯನ್ ಕಟ್ಟಡ ನಿರ್ಮಿಸಲಾಗಿದೆ.

ಇ) ಪೆವಿಲಿಯನ್ ಕಟ್ಟಡ ನಿರ್ಮಿಸಿದಾಗಲೇ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಲಭ್ಯವಿದ್ದ ಆಟದ ಬಯಲನ್ನು ಕ್ರೀಡಾಂಗಣ ನಿರ್ಮಿಸುವಾಗ ಸಮತಟ್ಟು ಮಾಡಲಾಗಿದೆ. ಟ್ರ್ಯಾಕ್ ಅಳವಡಿಸಲು ಲಭ್ಯವಿರುವ ನಿವೇಶನದಲ್ಲಿ ಸ್ಥಳಾವಕಾಶವಿರುವುದಿಲ್ಲ.

ಈ) ಅಗತ್ಯವಾದ ಹೆಚ್ಚುವರಿ ಸ್ಥಳವಾಕಾಶ ದೊರೆತ ನಂತರ ಟ್ರ್ಯಾಕ್ ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗುವುದು.